ಇಂದು ದಿಃ**24-04-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ಎನ್.ಆರ್ ವಕೀಲರಿಂದ ಪ್ರತಿವಾದಿಯರ ಪರಃ**

25 ಜನರ ವಿರುದ್ಧ ಈ ದಾವೆ ಸಲ್ಲಿಸಿದ್ದೇನೆ. ನನಗೆ ಎಲ್ಲಾ ಪ್ರತಿವಾದಿಯರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ನಮ್ಮನ್ನು ಶೇಖರಪ್ಪ ಅಲಿಯಾಸ್ ನಿಂಗಪ್ಪ ವಂಶಸ್ಥರು ಮತ್ತು 1 ರಿಂದ 6 ನೇ ಪ್ರತಿವಾದಿಯರನ್ನು ವಡ್ಡರಹಳ್ಳಿ ಹನಮಂತಪ್ಪ ಮನೆತನದವರು ಎಂದು ಕರೆಯುತ್ತಾರೆ. ನಮ್ಮ ಮತ್ತು ಅವರ ಮನೆತನಗಳು ಬೇರೆ ಬೇರೆ ಇರುವ ಕಾರಣ, ಆಸ್ತಿಗಳು ಸಹ ಪ್ರತ್ಯೇಕ ಇವೆ ಎಂದರೆ ಸರಿಯಲ್ಲ. ಸಾಕ್ಷಿ 6 ಎಕರೆ ಒಟ್ಟಾಗಿ ಇದೆ ಎಂದು ಹೇಳುತ್ತಾರೆ. ಇದು ನನ್ನ ಅಜ್ಜಿಯ ಆಸ್ತಿ, ನಮ್ಮ ತಂದೆಯ ಕುಟುಂಬಕ್ಕೆ ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ ನನ್ನ ಅಜ್ಜಿಯ ಹೆಸರಿಗೆ ಇರುವ 1 ಎಕರೆ 3 ಗುಂಟೆ ಎಂದು ಹೇಳುತ್ತಾರೆ. 2 ಮನೆಗಳು ಇವೆ. ಮನೆಗಳು ದಾವಣಗೆರೆ ತಾಲೂಕಿನ ಜರೆಕಟ್ಟೆ ಗ್ರಾಮದಲ್ಲಿ ಇವೆ. ನಮ್ಮ ಕುಟುಂಬಕ್ಕೆ ಟ್ರಾಕ್ಟರ್ ಇಲ್ಲ. ಉಳಿದ ಪ್ರತಿವಾದಿಯರನ್ನು ಏಕೆ ಸೇರಿಸಿದ್ದೀರಿ ಎಂದರೆ ಸಾಕ್ಷಿ ಆಸ್ತಿಯಲ್ಲಿ ಅವರಿಗೆ ಹಕ್ಕು ಇರುವ ಕಾರಣ ಸೇರಿಸಿದ್ದೇನೆ ಎಂದು ಹೇಳುತ್ತಾರೆ. ನಾನು 8 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. ಯಾರಿಗೆ ಎಷ್ಟು ಆಸ್ತಿ ಬರುತ್ತದೆ ಎಂದು ಗೊತ್ತಿಲ್ಲ. ಆಸ್ತಿ ಸಂಬಂಧ ಅವರನ್ನು ಪಕ್ಷಗಾರ ಎಂದು ಮಾಡಿದ್ದೇನೆ. ನಂತರದಲ್ಲಿ ಸೇರಿಸಿರುವ ಪ್ರತಿವಾದಿಗಳು ನಿಮ್ಮ ಕುಟುಂಬಸ್ಥರು ಅಲ್ಲ ಎಂದರೆ ಸಾಕ್ಷಿ ಕುಟುಂಬಸ್ಥರು ಎಂದು ಹೇಳುತ್ತಾರೆ. ಪ್ರತಿವಾದಿಯರು ನಮ್ಮ ಕುಟುಂಬಸ್ಥರು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಸರಿ. 8 ರಿಂದ 24 ನೇ ಪ್ರತಿವಾದಿಯರು ಎಲ್ಲೆಲ್ಲಿ ವಾಸ ಇದ್ದಾರೆ ಎಂದು ಹೇಳಲು ಆಗುವುದಿಲ್ಲ. 24 ನೇ ಪ್ರತಿವಾದಿ ಸರ್ವೆ ನಂಬರ್

35 ರಲ್ಲಿ 22 ಗುಂಟೆ ಮತ್ತು 22 ಗುಂಟೆ ಖರೀದಿ ಮಾಡಿರುತ್ತಾನೆ. ಈ ದಾವೆಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು 24 ನೇ ಪ್ರತಿವಾದಿಯ ಕ್ರಯಪತ್ರ ಕಾನೂನು ಬದ್ದ ಇರುವ ಕಾರಣ, ಅದನ್ನು ಈ ದಾವೆಯಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಹಾಕಿದ್ದೇವೆ ಎಂದು ಹೇಳುತ್ತಾರೆ. ಕ್ರಯಪತ್ರ ಯಾವಾಗ ಆಗಿದೆ ಎಂದು ಗೊತ್ತಿಲ್ಲ. 24 ನೇ ಪ್ರತಿವಾದಿಯ ಹೆಸರಿಗೆ ಮುಟೇಷನ್ ಮತ್ತು ಪಹಣಿ ಆಗಿದೆ. 24 ನೇ ಪ್ರತಿವಾದಿಯ ವಿರುದ್ದ ದಾವೆ ಹಾಕಿದರೆ ಆತ ಹಣಕೊಟ್ಟು ರಾಜೀ ಮಾಡಿಕೊಳ್ಳಬಹುದು ಎಂಬ ಉದ್ದೇಶದಿಂದ ಆತನ ವಿರುದ್ದ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಾವು ದಾವಾ ಆಸ್ತಿಗೆ ಸಂಬಂಧಿಸಿದವರು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆತನದ ಆಸ್ತಿ ಇದ್ದರೂ, ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.